# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 662 (690) |
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಬಿ.ಆರ್.ಹಿಲ್ಸ್ ಹುಲಿ ಅಭಯಾರಣ್ಯದಲ್ಲಿ 4 ಹುಲಿಗಳಿಗೆ ವಿಷ ಹಾಕಿ ಸಾಯಿಸಿರುವ ಪ್ರಕರಣದ ತನಿಖೆ ಯಾವ ಹಂತದಲ್ಲಿದೆ: ಮತ್ತು ಅಪರಾಧಿಗಳ ಗುರುತು ಪತ್ತೆಹಚ್ಚಾಲಾಗಿದೆಯೇ: ಹಾಗಿದ್ದಲ್ಲಿ ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಚಾಮರಾಜನಗರ ವೃತ್ತ ವ್ಯಾಪ್ತಿಯ ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವನ್ಯಜೀವಿ ವಲಯದಲ್ಲಿ 01 ತಾಯಿ ಮತ್ತು 04 ಹುಲಿ ಮರಿಗಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಪ್ಪ ಗ್ರಾಮದ ಮೂವರು ವ್ಯಕ್ತಿಗಳಾದ 1) ಮಾಧುರಾಜ್ ಆಲಿಯಾಸ್ ಮಾದೇಶ ಬಿನ್, ಶಿವಗೌಡ, 2) ನಾಗರಾಜು ಬಿನ್ ಪೂಜಾರಿಗೌಡ, 3) ಕೊನಪ್ಪ ಬಿನ್ ಸಣ್ಣಗೌಡ ಎಂಬ ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಸೆಕ್ಷನ್ 9, 27 ರ ಉಲ್ಲಂಘನೆ ಕರ್ನಾಟಕ ಅರಣ್ಯ ಕಾಯ್ದೆ-1963 ರ ಸೆಕ್ಷನ್ 24 ರ ಪ್ರಕಾರ WLOR No: 02/2025-26 ದಿನಾಂಕ: 26.06.2025 ರನ್ವಯ ಪ್ರಕರಣ ದಾಖಲಿಸಿಕೊಂಡು, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ ಹಾಗೂ ಈ ಪ್ರಕರಣದ ಬಗ್ಗೆ ರಚಿಸಲಾಗಿರುವ ಉನ್ನತ ಮಟ್ಟದ ತನಿಖಾ ಸಮಿತಿಯು ತನಿಖೆ ಕೈಗೊಂಡು ಪೂರ್ಣಗೊಳಿಸಿದ್ದು, ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ. |
| ಆ) | ಅಭಯಾರಣ್ಯದಲ್ಲಿ ಪ್ರಾಣಿಗಳ ಸುರಕ್ಷತೆಗೆ ಈಗಿರುವ ಕಾನೂನನ್ನು ಇನ್ನಷ್ಟು ಬಿಗಿಗೊಳಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ; | ಅಭಯಾರಣ್ಯದಲ್ಲಿ ಇರುವ ಪ್ರಾಣಿಗಳ ಸುರಕ್ಷತೆಗಾಗಿ ಕೇಂದ್ರ ಸರ್ಕಾರ ತಂದಿರುವ ಮತ್ತು ಚಾಲ್ತಿಯಲ್ಲಿರುವ ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರನ್ವಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಕಾನೂನಿನಲ್ಲಿನ ದಂಡದ ನಿಬಂಧನೆ (Penal Provision) ಸೂಕ್ತವಿರುತ್ತದೆ. |
| ಇ) | ಇಲ್ಲವಾದಲ್ಲಿ ಮಾಫಿಯಾಗಳು ಹಣದಾಸೆಗೆ ಅಕ್ರಮ ಕಳ್ಳಸಾಗಾಣಿಕೆ ಮಾಡಿ ಅಮೂಲ್ಯ ಪ್ರಾಣಿ ಸಂಕುಲ ಹಾಗೂ ಅರಣ್ಯ ಸಂಪತ್ತು ನಾಶ ಮಾಡುವ ಪ್ರಕರಣಗಳು ಹೆಚ್ಚಾಗಿರುವುದರಿಂದ ಈ ಕುರಿತು ಸರ್ಕಾರದ ಮಟ್ಟದಲ್ಲಿ ನಡೆದಿರುವ ಪ್ರಯತ್ನಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | **ವನ್ಯಪ್ರಾಣಿಗಳನ್ನು ರಕ್ಷಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**<br>• ಅರಣ್ಯ ಪ್ರದೇಶದಲ್ಲಿ ಗಸ್ತು ಕಾರ್ಯಾಚರಣೆಗಳನ್ನು ತೀವ್ರಗೊಳಿಸಿ, ಕಳ್ಳಬೇಟೆ ತಡೆ ಶಿಬಿರ (Anti-Poaching Camp) ಸಿಬ್ಬಂದಿಗಳಿಗೆ ಪ್ರತಿ ನಿತ್ಯ ವಿಭಿನ್ನ ದಿಕ್ಕುಗಳಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ವನ್ಯಜೀವಿಗಳ ಚಲನವಲನ ಅನಧಿಕೃತ ಚಟುವಟಿಕೆಗಳ ಮೇಲೆ ಕಣ್ಗಾವಲು ಇಡುವುದು ಹಾಗೂ ಕ್ಯಾಂಪ್ ಸಿಬ್ಬಂದಿಗಳು ಕಾಡಿನಲ್ಲಿ ಗಸ್ತು ಮಾಡುವಾಗ |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | M-STrIPES ಆಪ್ಲಿಕೇಶನ್ ಅನ್ನು ಪರಿಣಾಮಕಾರಿಯಾಗಿ ಬಳಸಲು ಸೂಚಿಸಲಾಗಿರುತ್ತದೆ. ಇವರ ಚಲನವಲನವನ್ನು ವಲಯ ಅರಣ್ಯಾಧಿಕಾರಿ ಮತ್ತು ವಿಭಾಗ ಕಛೇರಿಯಲ್ಲಿರುವ ನಿಯಂತ್ರಣ ಕೊಠಡಿಯ ಮೂಲಕ ನಿಗಾವಹಿಸಲಾಗುತ್ತಿದೆ.<br><br>• ಉಪ ವಲಯ ಅರಣ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿಗಳು ಪ್ರತಿದಿನ ಅರಣ್ಯದ ಗಡಿಯಲ್ಲಿ ಗಸ್ತು ಮಾಡುವುದು ಮತ್ತು ಅವರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗ್ರಾಮಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಸಮನ್ವಯ ಕಾಪಾಡಿ ಮಾನವ ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಕ್ರಮ ವಹಿಸಲು ಸೂಚಿಸಿದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ಗಸ್ತು ಸಮಯದಲ್ಲಿ ಡ್ರೋನ್ ಕ್ಯಾಮರಾಗಳು, ಕ್ಯಾಮರಾ ಟ್ರ್ಯಾಪ್‌ಗಳನ್ನು ಬಳಸಿ ವನ್ಯಪ್ರಾಣಿಗಳ ಚಲನವಲನಗಳ ಬಗ್ಗೆ ನಿಗಾವಹಿಸಲಾಗುತ್ತಿದೆ. ರಾತ್ರಿ ವೇಳೆಯಲ್ಲಿ ಅರಣ್ಯ ಗಸ್ತು ತಿರುಗಲು ಸಿಬ್ಬಂದಿಗಳ ತಂಡವನ್ನು ನಿಯೋಜಿಸಲಾಗಿದೆ. ಜೊತೆಗೆ ಆನೆಕಾರ್ಯಪಡೆ ಸಿಬ್ಬಂದಿಗಳನ್ನು ದಿನದ 24 ಗಂಟೆಯೂ ಸಹ ಅರಣ್ಯ ಗಡಿಭಾಗದಲ್ಲಿ ವನ್ಯಪ್ರಾಣಿ ಮತ್ತು ಮಾನವ ಸಂಘರ್ಷ ತಡೆಯಲು ನಿಯೋಜಿಸಲಾಗಿದೆ.<br><br>• ಅರಣ್ಯ ಪ್ರದೇಶದಲ್ಲಿ ನಡೆಯಬಹುದಾದಂತಹ ಅರಣ್ಯೇತರ ಚಟುವಟಿಕೆಗಳಿಗೆ ಸಂಬಂದಿಸಿದಂತೆ ಮಾಹಿತಿಯನ್ನು ತಿಳಿದುಕೊಳ್ಳಲು ಸ್ಥಳೀಯರಿಂದ ಗುಪ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br><br>**<u>ಸ್ಥಳೀಯ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ.</u>**<br><br>• ಜಾಗೃತಿ ಮೂಡಿಸುವ ಕಾರ್ಯ:- ಮನೆಮನೆಗೆ ತೆರಳಿ ಜನರೊಂದಿಗೆ ನೇರವಾಗಿ ಮಾತನಾಡಿ ಜಾಗೃತಿ ಮೂಡಿಸಿ ತಮಿಳುನಾಡಿನ ಜಾನುವಾರುಗಳನ್ನು ಅರಣ್ಯ ಪ್ರದೇಶದಲ್ಲಿ ಮೇಯಿಸಲು ಬಿಡಬಾರದೆಂದು ಹಾಗೂ ಆ ಜಾನುವಾರುಗಳನ್ನು ತುರ್ತಾಗಿ ತಮಿಳುನಾಡಿಗೆ ವಾಪಸ್ಸು ಕಳುಹಿಸಲು ಕ್ರಮ ಕೈಗೊಳ್ಳಲು ಕರ ಪತ್ರಿಕೆಗಳನ್ನು (Pamphlet) ಜನರಿಗೆ ಹಂಚಿ ತಿಳುವಳಿಕೆ ನೀಡಲಾಗಿರುತ್ತದೆ ಹಾಗೂ ತಮಿಳುನಾಡಿನ ಜಾನುವಾರುಗಳನ್ನು ವಾಪಸ್ಸು ಕಳುಹಿಸದೇ ಇದ್ದಲ್ಲಿ ಅರಣ್ಯ ಕಾನೂನು ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿರುತ್ತದೆ.<br><br>**ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಭೆ**<br><br>• ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಪೋಲೀಸ್, ಪಶುಪಾಲನಾ ಇಲಾಖೆ, ಕೃಷಿ ಇಲಾಖೆ ಮತ್ತು ಪಂಚಾಯತ್‌ರಾಜ್ ಇಲಾಖೆಗಳನ್ನೊಳಗೊಂಡ ಅಧಿಕಾರಿಗಳ ಸಭೆಯನ್ನು ನಡೆಸಿ ತಮಿಳುನಾಡಿನಿಂದ ಬರುವ ಜಾನುವಾರುಗಳನ್ನು ತಡೆಯಲು ಅರಣ್ಯ ಇಲಾಖೆ, ಪಶುಸಂಗೋಪನಾ ಇಲಾಖೆ ಮತ್ತು ಪೋಲೀಸ್ ಇಲಾಖೆಯವರ ಸಹಭಾಗಿತ್ವದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ನಿರ್ದೇಶಿಸಲಾಗಿರುತ್ತದೆ. ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಗ್ರಾಮಗಳಲ್ಲಿರುವ ಸ್ಥಳೀಯ ಹಾಗೂ ಹೊರರಾಜ್ಯದ ಜಾನುವಾರುಗಳ ಗಣತಿ, ಹೊರರಾಜ್ಯದ ಜಾನುವಾರುಗಳಿಗೆ ಸ್ಥಳಾವಕಾಶ ಮಾಡಿಕೊಡುವ ರೈತರ ಮಾಹಿತಿ ಕಲೆಹಾಕಲು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು, ಪಶು ಸಂಗೋಪನಾ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿ ತಂಡಗಳನ್ನು ರಚಿಸಿ ಶೀಘ್ರವಾಗಿ ವರದಿಯನ್ನು ಸಲ್ಲಿಸಲು ಸೂಚಿಸಿದಂತೆ ಈಗಾಗಲೇ 06 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಜಾನುವಾರು ಗಣತಿ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>• ಈ ಜಾನುವಾರು ಗಣತಿಯ ಆಧಾರದ ಮೇಲೆ ಸ್ಥಳೀಯ ಜಾನುವಾರುಗಳನ್ನು ಪ್ರಾರಂಭಿಕ ಹಂತದಲ್ಲಿ ಆಯಾಯ ಗ್ರಾಮದ ವ್ಯಾಪ್ತಿಯಲ್ಲಿರುವ ಗೋಮಾಳ ಅಥವಾ ಕ್ಷೀಣಿತ ಅರಣ್ಯ ಪ್ರದೇಶ ಗುರುತಿಸಿ ಆ ಪ್ರದೇಶದಲ್ಲಿ ಮಾತ್ರ ಜಾನುವಾರುಗಳನ್ನು ಮೇಯಿಸಬಹುದೆಂದು ಪ್ರಸ್ತಾಪಿಸಲಾಯಿತು. ನಂತರದ ದಿನಗಳಲ್ಲಿ ಹಂತ ಹಂತವಾಗಿ ಆ ಜಾನುವಾರುಗಳನ್ನು ಬದಲಾಯಿಸಿ ಅದರ ಬದಲಾಗಿ ರೈತರಿಗೆ ಹೆಚ್ಚಿನ ಹಾಲು ನೀಡುವ ಉತ್ತಮ ಜಾತಿಯ ಹಸುಗಳನ್ನು ಒದಗಿಸಿ, ಸ್ಟ್ಯಾಲ್ ಫೀಡಿಂಗ್ ಮಾಡಲು ಉತ್ತೇಜಿಸುವುದು ಹಾಗೂ ಉತ್ತಮ ತಳಿಯ ಕುರಿ, ಕೋಳಿ ಸಾಕಾಣಿಕೆಯನ್ನು ಅಳವಡಿಸಿಕೊಳ್ಳಲು ಒಂದು ಸಮಗ್ರ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ.<br><br>• ಮುಂದುವರಿದು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರ ಸಭೆಯಲ್ಲಿ ಕೀಟನಾಶಕಗಳನ್ನು ಸೂಕ್ತ ಉದ್ದೇಶ ಅಂದರೆ ಕೃಷಿ ಬೆಳೆಗೆ ಮಾತ್ರ ನಿಯಂತ್ರಿತವಾಗಿ ಬಳಸಲು ಮತ್ತು ಆ ಬಳಕೆದಾರರು ಮತ್ತು ಕೀಟನಾಶಕ ಮಾರಾಟಗಾರರ ಮಾರಾಟದ ವಿಧಾನದ ಮೇಲೆ ನಿಗಾವಹಿಸಲು ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ಜಿಲ್ಲೆ ರವರಿಗೆ ಕಟ್ಟುನಿಟ್ಟಾಗಿ ಸೂಚಿಸಿದಂತೆ ಜಂಟಿ ಕೃಷಿ ನಿರ್ದೇಶಕರು, ಚಾಮರಾಜನಗರ ರವರು ತಮ್ಮ ಅಧೀನದ ಸಹಾಯಕ ನಿರ್ದೇಶಕರುಗಳಿಗೆ, ಅಧಿಕೃತ ಕೀಟನಾಶಕ ಮಾರಾಟ ಮಳಿಗೆಗಳಲ್ಲಿ ಕೀಟನಾಶಕ ಪಡೆದ ಪ್ರತಿಯೊಬ್ಬ ಖರೀದಿದಾರರ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಕಡ್ಡಾಯವಾಗಿ ಪಡೆಯುವುದು ಮತ್ತು ತಪ್ಪದೇ ಅಧಿಕೃತ ಬಿಲ್ಲುಗಳನ್ನು ಖರೀದಿದಾರರಿಗೆ ನೀಡುವುದು, ಕೀಟನಾಶಕ ಮಾರಾಟ ಮಳಿಗೆಗಳಲ್ಲಿ CCTV ಯನ್ನು ಕಡ್ಡಾಯವಾಗಿ ಅಳವಡಿಸುವಂತೆ ಕ್ರಮವಹಿಸಲು ಹಾಗೂ Carbamate ಗುಂಪಿನ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡುವಂತೆ, Carbofuran ಬದಲಾಗಿ ಇತರೆ ಸಮನಾಂತರ ಕೀಟನಾಶಕಗಳನ್ನು (Chloropyriphos Granules 10 GR Chlorantraniliprole 0.4% GR, Fipronil 5%, SC etc) ಬಳಸಲು ರೈತರಲ್ಲಿ ಅರಿವು ಮೂಡಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>• ಮುಂದುವರಿದು ತಮಿಳುನಾಡಿನ ಜಾನುವಾರುಗಳನ್ನು ಚಾಮರಾಜನಗರ ಜಿಲ್ಲೆಯೊಳಗೆ ಬಿಡದಂತೆ ಈರೋಡ್ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಈ)</td><td>ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕಾಡು ಹಂದಿಯ ಕಾಟದಿಂದ ರೈತರು ಬೆಳೆ ಹಾನಿಗೊಳಗಾಗಿ ತುಂಬಾ ಕಷ್ಟದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಎಷ್ಟು ದೂರುಗಳು ಬಂದಿವೆ ಮತ್ತು ಎಷ್ಟು ದೂರುಗಳನ್ನು ವಿಲೇವಾರಿ ಮಾಡಲಾಗಿದೆ;</td><td>ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಡು ಹಂದಿಯಿಂದ ಉಂಟಾದ ಪ್ರಕರಣಗಳಿಗೆ ದಾಖಲಾದ ದೂರುಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ವಿಭಾಗ</th><th>ಬಂದಿರುವ ದೂರುಗಳ ಸಂಖ್ಯೆ</th><th>ವಿಲೇವಾರಿ ಮಾಡಲಾದ ದೂರುಗಳು</th></tr>
<tr><td>ಬೀದರ</td><td>1724</td><td>1643</td></tr>
<tr><td>ಕಲಬುರಗಿ</td><td>630</td><td>562</td></tr>
<tr><td>ರಾಯಚೂರು</td><td>1</td><td>1</td></tr>
<tr><td>ಯಾದಗಿರ್</td><td>11</td><td>11</td></tr>
<tr><td>ಬಳ್ಳಾರಿ</td><td>81</td><td>60</td></tr>
<tr><td>ವಿಜಯನಗರ</td><td>530</td><td>472</td></tr>
<tr><td>ಕೊಪ್ಪಳ</td><td>6</td><td>6</td></tr>
</table></td></tr>
<tr><td>ಉ)</td><td>ಅಂತಹ ರೈತರ ಕುಟುಂಬಗಳಿಗೆ ಸರ್ಕಾರದಿಂದ ನೀಡಲಾದ ಪರಿಹಾರವೇನು? (ಕಳೆದ 10 ವರ್ಷಗಳ ಮಾಹಿತಿಯನ್ನು ಜಿಲ್ಲಾವಾರು ನೀಡುವುದು).</td><td>ವನ್ಯಪ್ರಾಣಿಗಳಿಂದ ಉಂಟಾದ ಬೆಳೆಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಲಾದ ದರದನ್ವಯ ಪಾವತಿಸಲಾದ ಪರಿಹಾರದ ಧನದ ವಿವರ ಈ ಕೆಳಗಿನಂತಿದೆ.
<table>
<tr><th>ವಿಭಾಗ</th><th>ಪ್ರಕರಣಗಳ ಸಂಖ್ಯೆ</th><th>ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>ಬೀದರ</td><td>1643</td><td>88.13</td></tr>
<tr><td>ಕಲಬುರಗಿ</td><td>562</td><td>81.20</td></tr>
<tr><td>ರಾಯಚೂರು</td><td>1</td><td>6.70</td></tr>
<tr><td>ಯಾದಗಿರ</td><td>11</td><td>2. 65</td></tr>
<tr><td>ಬಳ್ಳಾರಿ</td><td>60</td><td>1.96</td></tr>
<tr><td>ವಿಜಯನಗರ</td><td>472</td><td>28.80</td></tr>
<tr><td>ಕೊಪ್ಪಳ</td><td>06</td><td>0.12</td></tr>
</table>
ಮುಂದುವರೆದು ಸರ್ಕಾರದ ದಿನಾಂಕ: 03.06.2025 ರ ಅಧಿಸೂಚನೆಯಲ್ಲಿ ವನ್ಯಜೀವಿ (ಸಂರಕ್ಷಣೆ) ಕಾಯ್ದೆ 1972, 11(1)(ಬಿ) ರನ್ವಯ ಕಾಡುಹಂದಿಯನ್ನು ಉಪದ್ರವಕಾರಿ ಪ್ರಾಣಿ (Vermin) ಎಂದು ಘೋಷಿಸುವ ಬಗ್ಗೆ ಆಯಾ ಪ್ರಾದೇಶಿಕ / ವನ್ಯಜೀವಿ ಕಾರ್ಯ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಧಿಕೃತ ಅಧಿಕಾರಿಯಾಗಿರುತ್ತಾರೆ.</td></tr>
</table>

**ಇ-ಸಂಖ್ಯೆ: ಅಪಜೀ 183 ಎಫ್‌ಡಬ್ಲ್ಯೂಎಲ್ 2025**

ಈಶ್ವರ ಬಿ. ಖಂಡ್ರೆ
ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು